**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No. 499/2019**

**CW- 2** **PW: 2**

ಸಾಕ್ಷಿಯ ಹೆಸರು ಃ ವಿನಯ ನಾಗನೂರು
ತಂದೆ/ಗಂಡನ ಹೆಸರು ಃ ಅಪ್ಪಣ್ಣ ನಾಗನೂರು
ವಯಸ್ಸು ಃ 31 ವರ್ಷ
ಉದ್ಯೋಗ ಃ ಖಾಸಗಿ ಕೆಲಸ
ವಾಸಸ್ಥಳ ಃ ಧಾರವಾಡ.

ದಿಃ **11.12.2019** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ

ಸ್ಥಳ ಮಹಜರನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ 2 ಬಿ ಇರುತ್ತದೆ. ಸದರಿ ಸಹಿಯನ್ನು 1 ವರ್ಷದ ಹಿಂದೆ ನಮ್ಮ ಕಂಪನಿಯಲ್ಲಿ ಹಾಕಿರುತ್ತೇನೆ. ಸದರಿ ಸ್ಥಳದಲ್ಲಿ ನಮ್ಮ ಕಂಪನಿಯ ಒಬ್ಬ ಸಿಬ್ಬಂದಿ ಚಾಸಾ 4 ರವರಿಗೆ ಹೊಡೆದು ಕಿಡ್‌ನ್ಯಾಪ ಮಾಡಿಕೊಂಡು ಹೋದ ಬಗ್ಗೆ ತಯಾರಿಸಿದ ಮಹಜರಿಗೆ ಸಹಿಯನ್ನು ಹಾಕಿರುತ್ತೇನೆ. ಸದರಿ ಸ್ಥಳದಲ್ಲಿ ನಾನಲ್ಲದೇ ಇತರರು ಸಹಿಯನ್ನು ಹಾಕಿರುತ್ತಾರೆ. ಮಹಜರನ್ನು ತಯಾರಿಸುವಾಗ ಮಧ್ಯಾಹ್ನ ಆಗಿತ್ತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನಾನು 2 ವರ್ಷದಿಂದ ಸದರಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಸದರಿ ಮಹಜರಿಗೆ ಒಟ್ಟು ಎಷ್ಟು ಜನ ಸಹಿ ಮಾಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ಮಹಜರಿಗೆ ಪಂಚ ರಾಗುವಂತೆ ನನ್ನನ್ನು ನಮ್ಮ ಕಂಪನಿಯ ಮ್ಯಾನೇಜರ ರವರು ಕರೆದಿರುತ್ತಾರೆ. ಅವರ ಹೆಸರು ಚಂದ್ರಶೇಖರ. ನಾವು ಸದರಿ ಸ್ಥಳದಲ್ಲಿ ಎಲ್ಲಾ ನೋಡಿ ನಂತರ ಸಹಿಯನ್ನು ಹಾಕಿರುತ್ತೇನೆ.

ಸದರಿ ಮಹಜರನ್ನು ಮಧ್ಯಾಹ್ನ 1 ಗಂಟೆಯ ನಂತರ 2 ಗಂಟೆಯ ಒಳಗೆ ತಯಾರಿಸಿರುತ್ತಾರೆ. ಘಟನಾ ಸ್ಥಳದ ಚಕ್ ಬಂದಿಯನ್ನು ನನಗೆ ಹೇಳಲು ಬರುವುದಿಲ್ಲ.

ಚಾಸಾ 1 ಚಂದ್ರಶೇಖರ ರವರು ನಮ್ಮ ಮೇಲಾಧಿಕಾರಿ ಎಂದರೆ ಸರಿ. ಚಾಸಾ 1 ರವರು ನಮ್ಮ ಕಂಪನಿಯ ಬಾಬ್ತು ಹೇಳಿದ ಕೆಲಸಗಳನ್ನು ನಾವು ಮಾಡಬೇಕಾಗುತ್ತದೆ. ನನ್ನ ಸಮಕ್ಷಮ ಘಟನಾ ಸ್ಥಳದಲ್ಲಿ ಯಾವುದೇ ಮಹಜರನ್ನು ತಯಾರಿಸಿಲ್ಲ ಹಾಗೂ ನನ್ನ ಸಹಿಯನ್ನು ಸ್ಥಳದಲ್ಲಿ ಪಡೆದುಕೊಂಡಿಲ್ಲ ಅಂದರೆ ಸರಿಯಲ್ಲ. ಸದರಿ ದಿನ ನಾನು ಒಂದೇ  ದಾಖಲೆಗೆ ಸಹಿಯನ್ನು ಹಾಕಿರುತ್ತೇನೆ. ಸದರಿ ಮಹಜರನ್ನು ತಯಾರಿಸಲು ನಾನು ಮಾಹಿತಿಯನ್ನು ನೀಡಿರುವುದಿಲ್ಲ. ಸ್ಥಳದಲ್ಲಿ ಘಟನೆಯ ಬಗ್ಗೆ ಪೋಲಿಸ ಕಾನ್ಸಟೇಬಲ್ ವಿಚಾರಿಸಿರುತ್ತಾರೆ.

ಸ್ಥಳಕ್ಕೆ ಸದರಿ ದಿನ ಇಬ್ಬರು ಪೋಲಿಸರು ಬಂದಿದ್ದು ಅವರ ಹೆಸರನ್ನು ಹೇಳಲು ಆಗುವುದಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರನ್ನು ತಯಾರಿಸದೇ ಇದ್ದರೂ ಕೂಡಾ ಚಾಸಾ 1 ರವರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

3 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ